**ನಿರ್ದೇಶಕರ ಕಛೇರಿ**
ಅಲ್ಪಸಂಖ್ಯಾತರ ಕಲ್ಯಾಣ
ನಿರ್ದೇಶನಾಲಯ

**ಕರ್ನಾಟಕ ಸರ್ಕಾರ**

ದೂರವಾಣಿ:080- 22863617.
ಫ್ಯಾಕ್ಸ್: 080-22863618.
**Email: directorgokdom@gmail.com**
**Web: www.gokdom.com**
20ನೇ ಮಹಡಿ, ವಿ.ವಿ ಗೋಪುರ,
ಡಾ।। ಅಂಬೇಡ್ಕರ್ ವೀಧಿ, ಬೆಂಗಳೂರು 560001.

**ಸಂಖ್ಯೆ:ಅಸಂನಿ/ಬಿದಾಯಿ/ಸಿಆರ್- /2014-15** **ದಿನಾಂಕ: 02.09.2014**

**ಗೆ,**
**ರಾಜ್ಯದ ಎಲ್ಲಾ ಜಿಲ್ಲಾ ಅಧಿಕಾರಿಗಳು,**
**ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**
**ಹಾಗೂ**
**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**

**ಮಾನ್ಯರೆ,**

**ವಿಷಯ:** ಬಿದಾಯಿ ಯೋಜನೆಯಡಿ ಅರ್ಜಿಗಳನ್ನು ಆನ್‌ಲೈನ್ (ಸಾಫ್ಟವೇರ್) ನಲ್ಲಿ ಭರ್ತಿ ಮಾಡುವ ಬಗ್ಗೆ.

******

ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲುಡಿ 533 ಎಂಡಿಎಸ್ 2013, ದಿ: 13.11.2013 ರ ಆದೇಶದಲ್ಲಿ ರಾಜ್ಯದ ಆರ್ಥಿಕವಾಗಿ ಹಿಂದಿಳಿದಿರುವ ಅಲ್ಪಸಂಖ್ಯಾತರ ಸಮುದಾಯಗಳಾದ ಮುಸ್ಲಿಂ, ಕ್ರೈಸ್ತ, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಹೆಣ್ಣುಮಕ್ಕಳು, ವಿಧವೆಯರು ಮತ್ತು ವಿಛ್ಛೇದಿತ ಮಹಿಳೇಯರಿಗೆ ಮದುವೆಯ ನಿಮಿತ್ತ ವಿವಾಹ ಖರ್ಚು ವೆಚ್ಚಗಳು, ಅಗತ್ಯವಿರುವ ಜೀವನಾವಶ್ಯಕ ಸಾಮಾಗ್ರಿಗಳನ್ನು ಖರೀದಿಸಲು ರೂ 50,000/-ಗಳ ಸಹಾಯಧನ ಮಂಜೂರು ಮಾಡಲು 13 ಷರತ್ತಿಗೊಳಪಟ್ಟು ಆದೇಶ ಹೊರಡಿಸಲಾಗಿದೆ.

ಅದರಂತೆ, 2013-14ನೇ ಸಾಲಿನಿಂದ ನಿರ್ದೇಶನಾಲಯದಿಂದ ಆಯವ್ಯಯಕ್ಕೆ ತಕ್ಕಂತೆ ಜನಸಂಖ್ಯಾ ಆಧಾರದ ಮೇಲೆ ಜಿಲ್ಲೆಗಳಿಗೆ ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗಧಿಪಡಿಸಿ ಹಂತ ಹಂತವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಹೀಗೆ ನಿರ್ದೇಶನಾಲಯದಿಂದ ಬಿಡುಗಡೆ ಮಾಡಲಾದ ಅನುದಾನವನ್ನು ಜಿಲ್ಲೆಗಳಿಂದ ಫಲಾನುಭವಿಗಳಿಗೆ ಮರು ಬಿಡುಗಡೆ ಮಾಡಲಾಗುತ್ತಿದೆ.